


**ಕಡುಗತ್ತಲ ನಡುವೆ ಹೊಳೆಯಿತೊಂದು ಮಿಂಚು!** ಹದಿನಾರರ ಗ್ರೇಟಾ ತನ್‌ಬರ್ಗ್, ಉರಿಯುತ್ತಿರುವ ಧರೆಯ ಮನದ ಮಾತಿಗೆ ಧ್ವನಿಯಾಗುತ್ತಿದ್ದಾಳೆ

ತಾತ್ವಿಕವಾಗಿ ಇದಕ್ಕೆ ಒಪ್ಪಿಗೆ ಕೊಟ್ಟವೆಯಾದರೂ ಬಲಾಢ್ಯ ರಾಷ್ಟ್ರಗಳು ಸಹಿಮಾಡದೆ ನುಣುಚಿಕೊಳ್ಳುತ್ತಿವೆ. ಅಮೆರಿಕ ಇದರಿಂದ ಹೊರಬರುವುದಾಗಿ ಘೋಷಿಸಿದೆ, ಇದು ದೊಡ್ಡ ಹಿನ್ನಡೆ. ಸ್ವತಃ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಹವಾಗುಣ ಬದಲಾವಣೆಯಾಗುತ್ತಿದೆ ಎಂಬ ಬಗ್ಗೆ ವಿಶ್ವಾಸವಿಲ್ಲ. 'ಇವೆಲ್ಲ ವಿಜ್ಞಾನಿಗಳ ತಲೆಹರಟೆ' ಎಂದು ಈ ಮನುಷ್ಯ ಬಲವಾಗಿ ನಂಬಿದ್ದಾನೆ, ವಿಶ್ವಸಂಸ್ಥೆಯ ಒತ್ತಡಕ್ಕೂ ಮಣಿದಿಲ್ಲ. ಈ ಹಗ್ಗದ ಜಗ್ಗಾಟ ಈಗಲೂ ನಡೆದೇ ಇದೆ.

ಇದಕ್ಕೆ ಹೊರತಾಗಿ ವಿಶ್ವಸಂಸ್ಥೆಯ ಆಶ್ರಯದಲ್ಲೇ 2014ರಿಂದ ಹವಾಗುಣ ಕಾರ್ಯಯೋಜನೆಯ ಶೃಂಗಸಭೆಗಳಾಗುತ್ತಿವೆ. ಇಲ್ಲಿನ ಒಂದು ವಿಶೇಷವೆಂದರೆ ಸದಸ್ಯ ರಾಷ್ಟ್ರಗಳಲ್ಲದೆ ಸಾರ್ವಜನಿಕರು, ಸರ್ಕಾರೇತರ ಸಂಸ್ಥೆಗಳು ಸಮಾವೇಶದಲ್ಲಿ ಭಾಗವಹಿಸಬಹುದು, ಚರ್ಚಿಸಬಹುದು, ಸರ್ಕಾರಗಳನ್ನು ತರಾಟೆಗೆ ತೆಗೆದುಕೊಳ್ಳಬಹುದು. 2019ರ ಸೆಪ್ಟೆಂಬರ್ 3ರಂದು ನ್ಯೂಯಾರ್ಕ್‌ನಲ್ಲಿ ಶೃಂಗಸಭೆಯಾದಾಗ ಜಾಗತಿಕ ಉಷ್ಣತೆ 1.5 ಡಿಗ್ರಿ ಸೆ. ಏರದಂತೆ ನಿಯಂತ್ರಿಸುತ್ತೇವೆ ಎಂಬ ಬದ್ಧತೆಯನ್ನು 77 ದೇಶಗಳು ಮಾತ್ರ ತೋರಿದವು. ಕಾರ್ಬನ್ ಡೈ ಆಕ್ಸೈಡ್ ಉತ್ಸರ್ಜನೆಯಲ್ಲಿ ಮುಂದಿರುವ ಮೊದಲ ನಾಲ್ಕು ರಾಷ್ಟ್ರಗಳು ತೋರಿದ ನಡೆ ವಿಶ್ವಸಂಸ್ಥೆಯಂತಿರಲಿ, ಭಾಗವಹಿಸಿದ ಜನಸಮಾನ್ಯರಿಗೂ ಒಪ್ಪಿತವಾಗಲಿಲ್ಲ. ಮಾಲಿನ್ಯದಲ್ಲಿ ಉತ್ತುಂಗದಲ್ಲಿರುವ ಚೀನಾ, ಪ್ಯಾರಿಸ್ ಒಪ್ಪಂದಕ್ಕೆ ಬದ್ಧವಾಗುತ್ತೇನೆ ಎಂಬ ಒಂದು ಮಾತನ್ನೂ ಆಡಲಿಲ್ಲ. ಇನ್ನು ನಮ್ಮ ಭಾರತ ಸೌರಶಕ್ತಿಯ ಬಳಕೆಯ ಬಗ್ಗೆ ಹೇಳಿತೇ ವಿನಾ ಕಲ್ಲಿದ್ದಲು ಬಳಕೆಯನ್ನು ಇಳಿಸುವ ಪ್ರಸ್ತಾಪವನ್ನೇ ಇಡಲಿಲ್ಲ. ಅಧ್ಯಕ್ಷ ಟ್ರಂಪ್ ಹತ್ತು ನಿಮಿಷದ ಮಟ್ಟಿಗೆ ಸಮಾವೇಶಕ್ಕೆ ಬಂದು ಏನೂ ಮಾತನಾಡದೆ ಹೊರಟೇಬಿಟ್ಟರು. ಪ್ಯಾರಿಸ್ ಒಪ್ಪಂದದಲ್ಲಿ 2020ರ ವೇಳೆಗೆ ಹೊಸ ಉಷ್ಣಸ್ಥಾವರಗಳನ್ನು ಸ್ಥಾಪಿಸಬಾರದೆಂಬ ಷರತ್ತೇ ಇರಲಿಲ್ಲ ಎಂದು ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಪೇಚಾಡಿಕೊಂಡರು.

ಇದೇ ಶೃಂಗಸಭೆಯಲ್ಲಿ ಎದ್ದು ಕಾಣುತ್ತಿದ್ದುದು 16ರ ಪ್ರಾಯದ, ಸ್ವೀಡನ್ನಿನ ಗ್ರೇಟಾ ತನ್‌ಬರ್ಗ್. ಈ ಹೊತ್ತಿಗಾಗಲೇ ಅವಳು ಸೆಲೆಬ್ರಿಟಿಯಾಗಿದ್ದಳು. ಇಲ್ಲಿಗೆ ಬರುವ ಮುನ್ನವೇ ಹವಾಗುಣ ಬದಲಾವಣೆ ಕುರಿತು ಜಾಗೃತಿ ಮೂಡಿಸಲು ಮಾಡಿದ ಭಾಷಣಗಳು ಎಷ್ಟು ಪ್ರಭಾವ ಬೀರಿದ್ದವೆಂದರೆ ಜಗತ್ತಿನಾದ್ಯಂತ 76 ಲಕ್ಷ ಮಂದಿ ಇವಳ ಧ್ವನಿಗೆ ಧ್ವನಿಯಾಗಿದ್ದರು. ಯುವಜನಕ್ಕೆ ಪರಿಸರದ ಬಗ್ಗೆ ಎಚ್ಚರವಿದೆ ಎಂಬುದರ ಕಹಳೆ ಇದಾಗಿತ್ತು. ಆಕೆ ಗದ್ಗದಿತಳಾಗಿ ಶೃಂಗಸಭೆಯಲ್ಲಿ ಹೇಳಿದ್ದಿಷ್ಟು:

'ನೀವು ಮಾಡುತ್ತಿರುವುದು ದೊಡ್ಡ ತಪ್ಪು. ನಾನು ಈ ವೇದಿಕೆಯಲ್ಲಿ ನಿಲ್ಲಬೇಕಾದ ಪ್ರಸಂಗವೇ ಇರಲಿಲ್ಲ. ಇಲ್ಲಿರುವ ಬದಲು ಸಾಗರದ ಇನ್ನೊಂದು ಬದಿಯಲ್ಲಿರುವ ಶಾಲೆಯಲ್ಲಿ ಇರಬೇಕಾಗಿತ್ತು. ಆದರೂ ನೀವು ನನ್ನ ಮೇಲೆ ಭರವಸೆ ಇಟ್ಟು ಬಂದಿದ್ದೀರಿ. ಖಾಲಿ ಮಾತಿನಿಂದ ನನ್ನ ಬಾಲ್ಯವನ್ನೂ ಕನಸನ್ನೂ ಕದ್ದಿದ್ದೀರಿ. ಆದರೂ ಅದೃಷ್ಟವಂತರಲ್ಲಿ ನಾನೂ ಒಬ್ಬಳು. ಜನ ನರಳುತ್ತಿದ್ದಾರೆ, ಸಾಯುತ್ತಿದ್ದಾರೆ. ಭೂಮಿಯ ಪರಿಸರ ವ್ಯವಸ್ಥೆ ಕುಸಿದುಹೋಗಿದೆ. ನಾವು ಸಾಮೂಹಿಕ ನಾಶದ ಆರಂಭದಲ್ಲಿದ್ದೇವೆ. ಬರಿ ಆರ್ಥಿಕತೆಯ ಬಗ್ಗೆ ಮಾತ್ರ ನೀವು ಮಾತನಾಡುತ್ತಿದ್ದೀರಿ. ಅವೆಲ್ಲ ಗುಮ್ಮನ ಕಥೆ. ನಿಮಗೆ ಎಷ್ಟು ಧೈರ್ಯ.'

ಗ್ರೇಟಾ ತನ್‌ಬರ್ಗ್ ಶೃಂಗಸಭೆಯಲ್ಲಿ ಕರತಾಡನ ಗಿಟ್ಟಿಸಿದಳು. ವಾಯುಗೋಳವನ್ನು ಹದಗೆಡಿಸಿರುವ ರಾಷ್ಟ್ರಗಳು ಇವಳ ಧೈರ್ಯವನ್ನು ಮೆಚ್ಚಿದವು. ಮರುದಿನ ಟ್ವೀಟ್ ಮಾಡಿದ ಡೊನಾಲ್ಡ್ ಟ್ರಂಪ್: 'ಈ ಹುಡುಗಿ ಚೆನ್ನಾಗಿ ಮಾತನಾಡಿದಳು. ಇವಳಿಗೆ ಒಳ್ಳೆಯ ಭವಿಷ್ಯವಿದೆ' ಎಂದರು. ಇದರ ಹೊರತು ಟ್ರಂಪ್ ಇನ್ನೇನು ಮಾತನಾಡಲೇ ಇಲ್ಲ.

ವಿಶ್ವಸಂಸ್ಥೆ ಜಾಗತಿಕ ಹವಾಗುಣ ಬದಲಾವಣೆ ಕುರಿತು ಅನೇಕ ಅಧ್ಯಯನಗಳನ್ನು ಕೈಗೊಂಡಿದೆ. ಇದರ ಅಂಗವಾದ 'ಅಂತರ ಸರ್ಕಾರಿ ಹವಾಗುಣ ಬದಲಾವಣೆ ಕೂಟ' (ಐ.ಪಿ.ಸಿ.ಸಿ.) ಮೂಲಕ ಇದೇ ಅಕ್ಟೋಬರ್ ತಿಂಗಳು ಜಾಗತಿಕ ಮಟ್ಟದಲ್ಲಿ 91 ವಿಜ್ಞಾನಿಗಳು ಮಾಡಿರುವ ವೈಜ್ಞಾನಿಕ ವರದಿ 6,000 ಪುಟಗಳಷ್ಟಿದೆ. 41 ದೇಶಗಳ ಪರಿಣತರ ತಂಡ ಈ ವರದಿಯನ್ನು ಕೂಲಂಕಷವಾಗಿ ಅಧ್ಯಯನಮಾಡಿದೆ. ಇದರಲ್ಲಿ ಬದಲಾದ ಹವಾಗುಣ ಎಲ್ಲ ದೇಶಗಳನ್ನು ಹೇಗೆ ಬಾಧಿಸಿದೆ ಎಂಬುದನ್ನು ಪಕಳೆ ಪಕಳೆಯಾಗಿ ಬಿಚ್ಚಿಟ್ಟಿದೆ. ಮೊದಲು ಇದನ್ನು ವಿಶ್ಲೇಷಿಸಿದ ತಂಡವೇ ಗಾಬರಿಯಾಗಿತ್ತು. 2030–2052ರ ನಡುವೆ ಜಾಗತಿಕ ಉಷ್ಣತೆ 1.5 ಡಿಗ್ರಿಗೆ ಏರಿರುತ್ತದೆ ಎಂಬುದನ್ನು ಮೊದಲು ಗಮನಿಸಿತು. ಹವಾಗುಣ ಬದಲಾವಣೆಗೆ ಯಾವ ದೇಶವೂ ಹೊರತಲ್ಲ. ಅಮೆರಿಕದ ಕ್ಯಾಲಿಫೋರ್ನಿಯ ಭಾಗದಲ್ಲಿ ಏಳುತ್ತಿರುವ ಕಾಳ್ಗಿಚ್ಚು, ಅಮೆಜಾನ್ ಮಳೆಕಾಡಿನ ಬೆಂಕಿ, ಗ್ರೀನ್‌ಲೆಂಡ್‌ನಲ್ಲಿ 1980ರಿಂದ ಈಚೆಗೆ ಬರ್ಫ ಆರು ಪಟ್ಟು ಹೆಚ್ಚು ಕಳಚಿಬೀಳುತ್ತಿರುವುದು, ಒಂದೇ ದಿನದಲ್ಲಿ 12.5 ಶತಕೋಟಿ ಟನ್ನು ಗ್ರೀನ್‌ಲೆಂಡ್‌ನಿಂದ ಕಳಚಿ ಬಿದ್ದಿರುವುದು ಸಮಿತಿಯನ್ನು ಗಾಬರಿಪಡಿಸಿತ್ತು. ಇಡೀ ಆಫ್ರಿಕ ಖಂಡ ಏರಿದ ಉಷ್ಣತೆಯಿಂದಾಗಿ ಹೇಗೆ ತನ್ನ ಜಲಮೂಲವನ್ನು ಕಳೆದುಕೊಳ್ಳುತ್ತಿದೆ ಎಂಬುದು ಒಂದು ಆತಂಕವಾದರೆ, ಇದಕ್ಕಿಂತ ಹೆಚ್ಚು ಆತಂಕ ಹುಟ್ಟಿಸಿರುವುದು ಹತ್ತು ಸಾವಿರ ಹಿಮನದಿಗಳಿರುವ ಹಿಮಾಲಯದಲ್ಲಿ ಭೂಉಷ್ಣತೆ ತರುತ್ತಿರುವ ಬದಲಾವಣೆ. ಅದಕ್ಕೆ ಸಂಬಂಧಿಸಿದಂತೆ ಕೃಷಿಗೆ ಬೀಳುತ್ತಿರುವ ಪೆಟ್ಟು ಕೂಡ ಈ ವರದಿಯಲ್ಲಿ ಉಲ್ಲೇಖಿತವಾಗಿದೆ. ಸದ್ಯದ ಸ್ಥಿತಿಯಲ್ಲಿ 10 ಲಕ್ಷ ಪ್ರಾಣಿ ಮತ್ತು ಸಸ್ಯ ಪ್ರಭೇದ ಶಾಶ್ವತವಾಗಿ ಭೂಮಿಯಿಂದ ಕಣ್ಮರೆಯಾಗುವ ಸಾಧ್ಯತೆಯ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಅಧ್ಯಯನ ತಂಡ 15,000 ವೈಜ್ಞಾನಿಕ ವರದಿಗಳನ್ನು ಬಳಸಿಕೊಂಡಿತು. ಆರೋಗ್ಯದಿಂದ ಹಿಡಿದು ಆರ್ಥಿಕತೆಯವರೆಗೆ ಹವಾಗುಣ ಬದಲಾವಣೆ ತರುವ ಸಂಕಟಗಳನ್ನು ತಜ್ಞರು ಈ ವರದಿಯಲ್ಲಿ ದಾಖಲಿಸಿದ್ದಾರೆ.

ಈಗ ನಿಮಗೆಲ್ಲ ಅರ್ಥವಾಗಿರಬಹುದು, ಭೂಮಿಯ ಭವಿಷ್ಯ ಯಾರ ಕೈಯಲ್ಲಿದೆ? ಮುಂದಿನ ಪೀಳಿಗೆಯ ಕೈಯಲ್ಲೇ? ರಾಜಕಾರಣಿಗಳ ಕೈಯಲ್ಲೇ? ಚರ್ಚಾಗೋಷ್ಠಿಯಲ್ಲೇ? ಇವೆಲ್ಲವೂ ಭೂಮಿಗೆ ಅಪ್ರಸ್ತುತ. ಅದು ಏನು ಮಾಡಬೇಕೋ ಅದನ್ನೇ ಮಾಡುತ್ತಿದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in